ಕಥೆ

ವಿಜಯಾ ಮೋಹನ್
ಕಲೆ: ಸಂತೋಷ್ ಸಸಿಹಿತ್ಲು

# ಡೆಂಗ್ಯು



ರೋಡಿನ ಪಕ್ಕಕ್ಕೆ ಅಂಟಿಕೊಂಡಿರುವ ಹತ್ತಾರು ಚಿತ್ತಾರದ ಮನೆಗಳು ಊರಲ್ಲಿ ಮನೆಗಳಿಗಂಟಿಕೊಂಡಿರುವ ಮರಗಿಡಗಳು. ಅದು ಊರೆಂದರೆ ಅವರವರ ಪಾಡಿಗಿರದಂಗೆ ಅಲ್ಲಲ್ಲಿ ಕುಂತುನಿಂತು ಎದ್ದವರ ಜನರೆಂಬ ಜನರ ನಡುವೆಯೆ ಇರುವ ಇಲ್ಲದಿರುವ ಉಸಾಬರಿಗಳನ್ನೆಲ್ಲ ಮೈಮ್ಯಾಲೆ ಎಳಕೊಂಡು ಗಲಗಲನೆ ಮೈದುಂಬಿ ಬೈದಾಡುವ ಕೊಸರಾಡುವ ರಾಜಿಯಾಗುವ ನಕ್ಕು ನವಿರಾಗುವ ಊರು. ಇಂಥ ಏರುಪೇರಿನ ಊರಿನಲ್ಲಿ ಎಲ್ಲಿ ನೋಡಿದರು ಸಂದಿಗೊಂದಿಗಳಲ್ಲೆಲ್ಲ ಉಂಡು ಉಗುಳುವಷ್ಟು ಉಕ್ಕಿ ಹರಿಯೊವಷ್ಟು ನಲ್ಲಿಗಳಲ್ಲಿ ಚಿಮ್ಮುತ್ತಿರುವ ನೀರು. ಭೂಮಿ ಮ್ಯಾಲೆ ಬದುಕು ನೀಡುವ ಜೀವರಾಶಿಗಳ ತಣಿಸಿ ಉಣಿಸುವ ನೀರು, ಯಾವ ದಂಡು ದಾಳಿಗಂಜದೆ ಟ್ಯಾಂಕುಗಳಲ್ಲಿ ನಲ್ಲಿಗಳಲ್ಲಿ ಹೊತ್ತು ಗೊತ್ತಿಲ್ಲದೆ ನೀರಿಗೆಂದು ತಿರುವಿದರೆ ಸಾಕು ಸಳಸಳನೆ ಸುರುದೋಗುತ್ತಿದ್ದವು. ಊರಲ್ಲಿ ಈಗೀಗ ನಿಂತು ಕೂರುವ ನಿಗದ ಬದುಕಿನಲ್ಲಿ ಯಾವ ಸಂದಿಗೊಂದಿಗಳಲ್ಲು ಮೊದಲಿನಷ್ಟು ನೀರಿಗೇನು ಕೊರತೆಯಿರಲಿಲ್ಲ. ಮನೆಮನೆಯ ನಲ್ಲಿಗಳೆಲ್ಲ ನಕ್ಕುನಕ್ಕು ನೀರೆಂಬೋವು ಗುಕ್ಕುಗುಕ್ಕಿಗೆ ಹೆಚ್ಚಾದವೇನೊ? ಅಂಬಂಗೆ ತೊಟ್ಟಿಕ್ಕುತ್ತಲೇ ಇರುವ, ಮನೆಯಾಗಿರುವ ಹೆಂಗಸರಿಗೆ ತಿಕ್ಕು, ತೊಳಿ, ಉಜ್ಜು, ವರಸು ಎನ್ನುವ ಅವರವರ ಲೋಕದಲ್ಲಿ ಮೈಮರೆಯುತ್ತಿರುವ ಈ ಹೊತ್ತಿನಲ್ಲಿ. ಸಿದ್ದಮ್ಮನ ಮನೆಯ ಮುಂದಿರುವ ನಲ್ಲಿಯೊಳಗೆ ಮಾತ್ರ ಈಗ್ಗೆ ಹೆಚ್ಚುಕಮ್ಮಿ ತಿಂಗಳಾಯಿತೇನೊ? ನೀರಿಲ್ಲದೆ